# 'ಡೆವಲಪ್‌ಮೆಂಟ್ ಡೈಲಾಗ್' ಇಂದಿನಿಂದ

■ ವಿಜಯವಾಣಿ ಸುದ್ದಿಜಾಲ ಹುಬ್ಬಳ್ಳಿ

'ಮರುಪರಿಶೀಲನೆ ಪರಿಣಾಮ' (ರಿಮ್ಯಾಜಿನಿಂಗ್ ಇಂಪ್ಯಾಕ್ಟ್) ಘೋಷವಾಕ್ಯದೊಂದಿಗೆ ದೇಶಪಾಂಡೆ ಫೌಂಡೇಶನ್ ನೇತೃತ್ವದಲ್ಲಿ ನಗರದ ಬಿವಿಬಿ ತಾಂತ್ರಿಕ ಮಹಾವಿದ್ಯಾಲಯ ಆವರಣದ ದೇಶಪಾಂಡೆ ಫೌಂಡೇಶನ್‌ನಲ್ಲಿ ಫೆ. 2ರಂದು ಬೆಳಗ್ಗೆ 9.30ಕ್ಕೆ 'ಡೆವಲಪ್‌ಮೆಂಟ್ ಡೈಲಾಗ್' ಉದ್ಘಾಟನೆಗೊಳ್ಳಲಿದೆ. ಗೋಕುಲ ರಸ್ತೆಯ ದೇಶಪಾಂಡೆ ಸ್ಕಿಲ್ ಗುರುಕುಲದಲ್ಲಿ ಬೆಳಗ್ಗೆ 9.30ರಿಂದ 'ಯುವ ಸಮ್ಮೇಳನ' ನಡೆಯಲಿದೆ.

ಐಐಎಂ ವಿಶ್ರಾಂತ ನಿರ್ದೇಶಕ ಸುಶೀಲ್ ವಚನಿ, ಇಯರ್ ಅಪ್ ಸಂಸ್ಥಾಪಕ ಗೆರಾಲ್ಡ್ ಚೆರ್ತಾವಿಯನ್, ಐಎಲ್ ಆ್ಯಂಡ್ ಎಫ್‌ಎಸ್ ಎಜುಕೇಶನ್ ಆ್ಯಂಡ್ ಟೆಕ್ ಸರ್ವಿಸಸ್ ಸಿಇಒ ಆರ್‌ಸಿಎಂ ರೆಡ್ಡಿ, ಐಮೆರಿಟ್ ಟೆಕ್ನಾಲಜೀಸ್ ಸಂಸ್ಥಾಪಕಿ ರಾಧಾ ಬಸು, ಕೆಎಲ್‌ಇ ತಾಂತ್ರಿಕ ವಿವಿ ಉಪ ಕುಲಪತಿ ಡಾ. ಅಶೋಕ ಶೆಟ್ಟರ್ ಮಾತನಾಡುವರು. ಇಂಡಿಹುಡ್ ಸಂಸ್ಥಾಪಕ ಲಲಿತೇಶ ಕತ್ರಗಡ್ಡ, ಫರ್ಮ್‌ವೇದ ಸಂಸ್ಥಾಪಕ ಪ್ರೊ. ತ್ರಿಲೋಚನ ಶಾಸ್ತ್ರಿ, ಸಿನಿ ಸಂಸ್ಥಾಪಕ ಗಣೇಶ ನೀಲಂ, ದೇಶಪಾಂಡೆ ಫೌಂಡೇಶನ್‌ನ ಕೃಷಿ ಉಪಕ್ರಮಗಳ ನಿರ್ದೇಶಕ ಯುನೂಸ್ ಖಾನ್ ಮಧ್ಯಾಹ್ನ 12ರಿಂದ 1ರವರೆಗೆ ನಡೆಯುವ ಎರಡನೇ ದಿನ ಗೋಷ್ಠಿಯಲ್ಲಿ ಸಲಹೆ-ಸೂಚನೆಗಳನ್ನು ನೀಡುವರು. ಮಧ್ಯಾಹ್ನ 2.30ರಿಂದ 3.30ರವರೆಗೆ ನಡೆಯುವ ಮೂರನೇ ಗೋಷ್ಠಿಯಲ್ಲಿ ಗ್ರಾಮೀಣಾಭಿವೃದ್ಧಿ ಸಚಿವ ಕೃಷ್ಣ ಭೈರೇಗೌಡ, ಇನ್ಫೋಸಿಸ್ ಸಂಸ್ಥಾಪಕ ನಾರಾಯಣಮೂರ್ತಿ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಟಿ.ಎಂ. ವಿಜಯಭಾಸ್ಕರ, ಫೋರ್ಡ್ ಫೌಂಡೇಷನ್ ಪ್ರಾದೇಶಿಕ ನಿರ್ದೇಶಕ ಪ್ರದೀಪ ನಾಯರ್, ಪಿರಮಲ್ ಫೌಂಡೇಶನ್ ಮುಖ್ಯಸ್ಥ ಪರೇಷ್ ಪಾರಸ್ನಿಸ್ 'ಮರುಪರಿಶೀಲನಾ ಸಹಭಾಗಿತ್ವ' ಕುರಿತು ಮಾತನಾಡುವರು.

ಸಂಜೆ 6ರಿಂದ ರಾತ್ರಿ 9ಗಂಟೆವರೆಗೆ 'ಮಹಾನ್ ಸಾಧಕರೊಂದಿಗೆ ಸಂಜೆ' ಕಾರ್ಯಕ್ರಮ ಏರ್‌ಪೋರ್ಟ್ ರಸ್ತೆಯ ಇನ್ಫೋಸಿಸ್ ಆವರಣದಲ್ಲಿ ನಡೆಯಲಿದೆ. ಇನ್ಫೋಸಿಸ್ ಸಂಸ್ಥಾಪಕ ನಾರಾಯಣ ಮೂರ್ತಿ, ದೇಶಪಾಂಡೆ ಫೌಂಡೇಶನ್ ಸಂಸ್ಥಾಪಕ ಗುರುರಾಜ ದೇಶಪಾಂಡೆ, ಗ್ರಾಮೀಣಾಭಿವೃದ್ಧಿ ಸಚಿವ ಕೃಷ್ಣ ಭೈರೇಗೌಡ, ಸಿಂಟೆಲ್ ಸಂಸ್ಥಾಪಕ ಭಾರತ್ ದೇಸಾಯಿ ಸೇರಿದಂತೆ ಮಹಾನ್ ಸಾಧಕರು ಮಾರ್ಗದರ್ಶನ ನೀಡುವರು.